(c) Yes.

(d) In the letter No. HUD 133 MNY 78 dated 16th April 1979 addressed to the Commissioner, the Corporation was informed that the proposal to levy property tax at 20% of annual rateable value would be considered by Government after the Corporation elections.

SRI B. B. SAYANAK.—Mr. Speaker Sir, three days back, I had raised a question under Rule 312. At that time, the hon. Minister categorically stated that there was a discrimination. I do not want to put any supplementary.

SRI DHARAM SINGH.—Mr. Speaker Sir, already we have discussed this matter in the House. We have convened a Meeting to be held on the 14th and there we will discuss this matter and settle it.

**Imprevement of Water Supply Position in Bangalore City**

208 SRI P. RAMDEV(Malleswaram).—Will the Minister for Housing and Urban Development be pleased to state:—

(a) the steps taken by the Government to (augment) improve the water supply position in Bangalore City and the stages of such measures.

(b) the cost of the Augmentation scheme ;

(c) the steps taken by the Government to meet this cost?

SRI DHARM SINGH (Minister for Housing and Urban Development)

(a) Administrative approval has been accorded to an estimate of Rs. 55.50 crores for the Cauvery II Stage Scheme for supplying an additional 30 million gallons of water per day to the Bangalore Metropolitan area.

(b) the estimated cost of the augmentation scheme is Rs. 55.50 crores.

(c) The Cauvery Stage II Scheme will be financed as followes :

| | (Rs. in crores) |
|---|---|
| (i) Provision included in the Plan. | 22.00 |
| (ii) Loan sanctioned by the Life Insurance Corporation of India. | 20.00 |
| (iii) Re-scheduling of repayment of loans taken for the Cauvery Stage I Scheme. | 10.00 |
| (iv) Advance payment by large industries and Defence establishments located in Bangalore. | 3.50 |
| Total ... | 55.50 |

ಶ್ರೀ ಪಿ. ರಾಂದೇವ್.—ಉತ್ತರದಲ್ಲಿ ಅಡಳಿತಾತ್ಮಕವಾಗಿ ಅನುಮೋದಿಸಲಾಗಿದ್ದಿತೆಂದು ಹೇಳಿದ್ದೀರಿ. ಟೆಕ್ನಿಕಲ್ ಸ್ಯಾಂಕ್ಷನ್ ಆಗಿದೆಯೇ? ಪಣ ಎಷ್ಟು ಕೊಟ್ಟಿದ್ದೀರಿ, ಇದು ೧೯೭೩ ರಿಂದ ನಡೆಯುತ್ತಿದೆ, ಎಷ್ಟು ಪ್ರಗತಿ ಇಲ್ಲಿಯವರೆಗೆ ಆಗಿದೆ ಎಂಬುದನ್ನು ತಿಳಿಸುತ್ತೀರಾ?

ಶ್ರೀ ಧರ್ಮಸಿಂಗ್.—ಟೆಕ್ನಿಕಲ್ ಸ್ಯಾಂಕ್ಷನ್ ಕೂಡ ಆಗಿದೆ. ಈಗ ಯೋಜನೆಗೆ ೫೫ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಮತ್ತು ಅಲ್ಲಿ ಕೆಲಸ ಕೂಡ ಪ್ರಗತಿಯ ಹಾದಿಯಲ್ಲಿದೆ.

ಶ್ರೀ ಪಿ. ರಾಂದೇವ್.—೧೯೭೩ ರಲ್ಲಿ ಕಾವೇರಿ ಯೋಜನೆಯಿಂದ ಬೆಂಗಳೂರು ನಗರದ ಜನಕ್ಕೆ ನೀರನ್ನು ಕೊಡಬೇಕು ಎನ್ನುತಕ್ಕ ಚರ್ಚೆಯಾಗಿ ನಡೆಯಿತು. ೧೯೭೩ ರಲ್ಲಿ ಮೊದಲನೆಯ ಹಂತದ ಯೋಜನೆ ಮುಗಿಯಿತು. ಎರಡನೇ ಹಂತದ ಯೋಜನೆಯನ್ನು ಹಿಂದೆಯೇ ಹಾಕಿಕೊಂಡಿದ್ದರು, ಅದು ೧೯೮೩ ಕ್ಕೆ ಕಂಪ್ಲೀಟ್ ಆಗಬಹುದೆಂದು ಹೇಳಿದ್ದೀರಿ. ೧೦ ವರ್ಷಕ್ಕೊಮ್ಮೆಯಂತೆ ನೀವು ಈ ಯೋಜನೆಯನ್ನು ತೆಗೆದುಕೊಳ್ಳುತ್ತಾ ಹೋದರೆ, ಇದನ್ನು ಯಾವ ಆಧಾರದ ಮೇಲೆ, ಎಷ್ಟು ಜನಸಂಖ್ಯೆ ಆಧಾರದ ಮೇಲೆ ತಲಾ ಎಷ್ಟು ನೀರನ್ನು ಹಂಚಬಹುದು ಎನ್ನುವ ಯೋಜನೆಯನ್ನಿಟ್ಟುಕೊಂಡಿದ್ದೀರಿ? ೧೦ ವರ್ಷಕ್ಕೆಂದು ನೀವು ಯೋಜನೆ ಹಾಕಿಕೊಂಡರೆ ಅದು ಔಟ್ ಡೇಟ್ ಆಗಿ ಬರುತ್ತದೆ. ೧೯೮೩ ರಲ್ಲಿ ನೀವು ಎರಡನೆಯ ಹಂತದ ಯೋಜನೆಯನ್ನು ಮುಗಿಸಿದಾಗ ಬೆಂಗಳೂರು ಜನಕ್ಕೆ ಎಷ್ಟೆಷ್ಟು ತಲಾ ಎಷ್ಟೆಷ್ಟು ಜನಕ್ಕೆ ನೀರು ದೊರಕಬಹುದೆಂಬುದನ್ನು ಹೇಳುತ್ತೀರಾ?

ಶ್ರೀ ಧರ್ಮಸಿಂಗ್.—ಅಧ್ಯಕ್ಷರೇ ಈಗ ನಾವು ಸಧ್ಯಕ್ಕೆ ಕೊಡತಕ್ಕಂಥದ್ದು ಪರ್ ಕ್ಯಾಪಿಟ ೫೦ ಗ್ಯಾಲನ್ಸ್ ಕೊಡುತ್ತಿದ್ದೇವೆ. ಈಗ ಬೆಂಗಳೂರಿನ ಪಾಪ್ಯುಲೇಷನ್ ೨೫ ಲಕ್ಷವಿದೆ. ಇದನ್ನೆಲ್ಲಾ ನಾವು ಗಮನದಲ್ಲಿಟ್ಟುಕೊಂಡು ಮುಂದೆ ಬರತಕ್ಕ ದಿವಸದಲ್ಲಿ ೧೯೮೩-೮೪ ರಲ್ಲಿ ಎಷ್ಟು ಜನಸಂಖ್ಯೆಯಾಗಬಹುದೆಂಬುದನ್ನು ಗಮನದಲ್ಲಿಟ್ಟುಕೊಂಡು ಕನಿಷ್ಟ ಪಕ್ಷ ೬೦ ಗ್ಯಾಲನ್ಸನ್ನು ನೀರನ್ನಾದರೂ ಕೊಡಬೇಕೆಂಬುದನ್ನು ಗಮನದಲ್ಲಿಟ್ಟುಕೊಂಡೇ ಈ ಎರಡನೆಯ ಹಂತ ಯೋಜನೆಯನ್ನು ಪ್ರಾರಂಭ ಮಾಡಿದ್ದೇವೆ. ಈ ಎರಡನೆಯ ಹಂತದ ಯೋಜನೆ ೧೯೮೩ ರಲ್ಲಿಯೇ ಮುಗಿಯುತ್ತದೆ. ಈ ಯೋಜನೆ ತಡವಾಗುವುದಕ್ಕೆ ಕೆಲವು ಕಾರಣಗಳಿದ್ದವು ಪೈಪಗಳದು ಸ್ವಲ್ಪ ತೊಂದರೆ ಇತ್ತು, ಈಗ ಅದು ಎಲ್ಲಾ ಸರಿಪಡಿಸಿದ್ದೇವೆ. ಮತ್ತು ಬೆಂಗಳೂರು ದಿನೇ ದಿನೇ ಬೆಳೆಯುತ್ತಿದೆ, ಬಹಾಜನಗಳು ಸಹ ಹೆಚ್ಚಾಗುತ್ತಿವೆ ಅದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಸರ್ಕಾರ ಮೂರನೇ ಸ್ಟೇಜನ್ನು ಸಹ ಪ್ರಾರಂಭ ಮಾಡುವ ನಿರ್ಧಾರದಲ್ಲಿದೆ. ಅದಕ್ಕೆ ೧೪೦ ಕೋಟಿ ರೂಪಾಯಿಗಳು ಬೇಕಾಗಬಹುದೆಂಬ ಅಂದಾಜಾಗಿದೆ. ೧೯೮೨ ರಲ್ಲಿ ಮುಗಿಯುವ ಯೋಜನೆಯಿಂದ ಅದು ೧೯೮೫-೮೬ ರವರೆಗೆ ಸಾಕಾಗುತ್ತದೆ. ಆನಂತರ ಉದ್ಭವವಾಗುವ ತೊಂದರೆಗಳನ್ನು ಗಮನದಲ್ಲಿಟ್ಟುಕೊಂಡು ೧೪೦ ಕೋಟಿ ರೂಪಾಯಿಗಳ ಮೂರನೆಯ ಯೋಜನೆಯನ್ನು ಮಾಡತಕ್ಕ ರೀತಿಯಲ್ಲಿದ್ದೇವೆ. ಇದರ ಬಗ್ಗೆ ನಾವು ಎಲ್ಲಾ ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿ ಇನ್ಸ್ಟ್ರಕ್ಷನ್ ಕೊಟ್ಟಿದ್ದೇನೆ. ಮುಂದೆ ಯಾವ ರೀತಿಯು ತೊಂದರೆಯಾಗಬಾರದು ಎನ್ನುತಕ್ಕ ರೀತಿಯಲ್ಲಿ ಎಲ್ಲಾ ವ್ಯವಸ್ಥೆ ಮಾಡಿಕೊಂಡಿದ್ದೇವೆ. ಮುಂದೆ ಬೇಸಿಗೆ ಕಾಲದಲ್ಲಿ ನೀರನ್ನು ಬಿಗಿಸಬೇಕು ಎನ್ನುವುದಕ್ಕಾಗಿ ಮೆಜಿಸ್ಟ್ರೇಟ್ರಿಯಲ್ ಪವರ್ಸ್‌ಗಳನ್ನು ಕೂಡ ವ್ಯವಸ್ಥೆ ಮಾಡಿ ಇಟ್ಟಿದ್ದೇವೆ. ಮತ್ತೆ ಈ ಸಮ್ಮರ್ ಸೀಜನ್‌ನಲ್ಲಿ ಫಸ್ಟ್ ಫ್ಲೋರಿಗೆ ಸೆಕೆಂಡ್ ಫ್ಲೋರ್‌ಗೆ ನೀರನ್ನು ಒದಗಿಸತಕ್ಕ ರೀತಿಯಲ್ಲಿ ಕೂಡ ಗುಮನದಲ್ಲಿಟ್ಟುಕೊಂಡು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ಯಾವ ರೀತಿಯಿಂದಲೂ ಬೆಂಗಳೂರು ನಗರದ ಜನತೆಗೆ ತೊಂದರೆಯಾಗಬಾರದು ಎನ್ನುವುದನ್ನು ಗಮನದಲ್ಲಿಟ್ಟುಕೊಂಡೇ ಸೂಚನೆ ಕೊಡಲಾಗಿದೆ. ಇದರ ಬಗ್ಗೆ ಮಾನ್ಯ ಸದಸ್ಯರು ಏನು ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ ಅದರಲ್ಲೂ ಬೆಂಗಳೂರು ನಗರದ ತಾಸಕರು ಏನು ಕಳಕಳಿಯನ್ನು ವ್ಯಕ್ತಪಡಿಸಿದ್ದಾರೋ ಅದರಿಗೆ ಈ ಮೂಲಕ ಉತ್ತರವನ್ನು ಕೊಡುತ್ತಿದ್ದೇನೆ. ವಾಟರ್ ಪ್ರಾಬ್ಲಂ ಏನಿದೆ ಅದರ ಬಗ್ಗೆ ಹೆಚ್ಚು ತೊಂದರೆಯಾಗಬಾರದು ಎನ್ನುವ ಬಗ್ಗೆ ಸರ್ಕಾರ ತೀವ್ರವಾದ ಗಮನವನ್ನು ಕೊಡುತ್ತಿದೆ ಎನ್ನುವ ಬಗ್ಗೆ ಭರವಸೆಯನ್ನು ಕೊಡುತ್ತಿದ್ದೇನೆ.

ಶ್ರೀ ಮಾದೇಗೌಡ (ಬನ್ನೂರು).—ಜೀವವಿಮಾ ಸಂಸ್ಥೆಯವರು ಪಟ್ಟಣಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಗಾಗಿ ಸಾಲ ಮಂಜೂರು ಮಾಡತಕ್ಕ ವ್ಯವಸ್ಥೆಯನ್ನು ಇಟ್ಟುಕೊಂಡಿದ್ದಾರೆ ಆದರೆ ಹಳ್ಳಿಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಯ ಬಗ್ಗೆ ಸರ್ಕಾರ ಜೀವ ವಿಮಾ ಸಂಸ್ಥೆಯವತಿಯಿಂದ ಸಾಲ ಪಡೆಯಲು ಏನಾದರೂ ಪ್ರಯತ್ನ ಮಾಡಿದ್ದಾರೆಯೇ? ಮಾಡಿದ್ದರೆ ಜೀವವಿಮಾ ಸಂಸ್ಥೆಯವರು ಎಷ್ಟು ಹಣವನ್ನು ಮಂಜೂರು ಮಾಡಿದ್ದಾರೆ ಎಂದು ತಿಳಿಸಲಿಕ್ಕೆ ಸಾಧ್ಯವೆ?

ಶ್ರೀ ಧರ್ಮಸಿಂಗ್ (ಮಾನ್ಯ ನಗರಾಡಳಿತ ಸಚಿವರು).—ನನ್ನ ಇಲಾಖೆಗೆ ಸಂಬಂಧಪಟ್ಟಂತೆ ನಗರಸಭೆಗಳಿಗೆ ಕುಡಿಯುವ ನೀರಿನ ಎಸ್ಟಿಮೇಟ್ ಮಂಜೂರು ಮಾಡಬೇಕೆಂದು ತೀರ್ಮಾನ ತೆಗೆದು ಕೊಂಡಿದ್ದೇವೆ, ಇನ್ನೂ ಎಷ್ಟೋ ನಗರಸಭೆಗಳಿಗೆ ಹಾಗೂ ಉಳಿದ ಹಳ್ಳಿಗಳಿಗೂ ನೀರಿನ ವ್ಯವಸ್ಥೆ ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿದೆ.

ಶ್ರೀ ಎಂ. ಗೋವಿಂದಗೌಡ (ಕೋಲಾರ).—ಕಾವೇರಿ ನೀರಿನ ವ್ಯವಸ್ಥೆಗೆ ಮಾಡಿರುವ ಖರ್ಚು ನೋಡಿದರೆ ಬಹಳ ಹೆಚ್ಚು ಹಣವನ್ನು ಖರ್ಚುಮಾಡಿರುವಹಾಗೆ ಕಾಣುತ್ತದೆ ಬರೀ ಬೆಂಗಳೂರು ಪಟ್ಟಣಕ್ಕೆ ಅಷ್ಟನ್ನು ಉಪಯೋಗಿಸುವ ಬದಲು ನಮ್ಮ ಹಳ್ಳಿಗಳ ಕಡೆ ಬೆಳಿಗಳಿಗೆ ನೀರಿಲ್ಲದೆ ತುಂಬಾ ತೊಂದರೆ ಇರುವುದರಿಂದ ಮುಂದಿನ ಮೂರನೇ ಹಂತವನ್ನು ತೆಗೆದುಕೊಳ್ಳುವಾಗ ನಮ್ಮ ಹಳ್ಳಿಗಳಿಗೆ ನೀರು ಕೊಡಲು ಸರ್ಕಾರ ಯೋಚನೆ ಮಾಡಿದೆಯೇ? ಯೋಜನೆ ಮಾಡಿದ್ದರೆ ಹಳ್ಳಿಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡುತ್ತೀರಾ?

ಶ್ರೀ ಧರ್ಮಸಿಂಗ್.—ಈಗ ಹಾಕಿಕೊಂಡಿರುವಕ್ಕಿಂಥ ಯೋಜನೆಯಲ್ಲಿ ಬೆಂಗಳೂರು ಜನತೆಗೆ ಕುಡಿಯಲಿಕ್ಕೆ ನೀರನ್ನು ಕೊಡಲು ಸಾಧ್ಯ. ಬೇರೆ ಯಾವ ಕಡೆಗೂ ಈಗಿರುವ ಮಟ್ಟದಲ್ಲಿ ನೀರನ್ನು ಕೊಡಲಿಕ್ಕೆ ಸಾಧ್ಯವಿಲ್ಲ.

ಶ್ರೀ ಮುತ್ತಿನಪೆಂಡಿಮಠ್.—ಗುಲ್ಬರ್ಗಾ ಮತ್ತು ಗದಗ್ ಬೆಟಗೇರಿಯಲ್ಲಿ ಕುಡಿಯುವ ನೀರಿನ ಬಗ್ಗೆ ಬಹಳ ತೊಂದರೆಯಾಗಿದೆ, ಆದರಿಂದ ಇದರ ಬಗ್ಗೆ ತೀವ್ರ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಧರ್ಮಸಿಂಗ್.—ಗದಗ್ ಬೆಟಗೇರಿ ಕುಡಿಯುವ ನೀರಿನ ಬಗ್ಗೆ ೧೦ ಕೋಟಿ ರೂಪಾಯಿ ಯೋಜನೆ ಇದೆ, ಆದ್ದರಿಂದ ಅದನ್ನು ಬಹಳ ಆಸಕ್ತಿವಹಿಸಿ ಮಾಡತಕ್ಕ ವಿಷಯ ಸರ್ಕಾರದ ತೀವ್ರ ಗಮನದಲ್ಲಿದೆ.

ಶ್ರೀ ಎಂ. ಚಂದ್ರಶೇಖರ್ (ಜಯನಗರ).—ನಮ್ಮ ಬೆಂಗಳೂರು ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಬೆಂಗಳೂರು ನಗರ ಕಾರ್ಪೊರೇಷನ್, ಬಿಡಿಎ ಹಾಗೂ ವಾಟರ್ ಸಪ್ಲೈ ಜೋರ್ಡ್ ನಗರ ಸಭೆಯ ಪರಿಮಿತಿಯಲ್ಲಿ ೧೯೬೪ ರಲ್ಲಿ ಕೆಲವು ಹಳ್ಳಿಗಳನ್ನು ನಗರಸಭೆಗೆ ಸೇರಿಸಿಕೊಂಡಿದ್ದು ಅಲ್ಲಿಗೆ ಕುಡಿಯುವ ನೀರಿನ ವ್ಯವಸ್ಥೆಯಾಗಿಲ್ಲ. ಆವರೆ ಎಸ್ಟಿಮೇಟ್ ಪ್ರಿಪೇರ್ ಆಗಿ ಬಿಡಿಎ ನವರು ಇದು ರೆವಿನ್ಯೂಗೆ ಸೇರಿದೆ ಎಂದು ಎಸ್ಟಿಮೇಟ್ ಸರ್ಕಾರದವರಿಗೆ ಕಳುಹಿಸಿದೆ. ಇದರಲ್ಲಿ ತಾವರೆಕೆರೆ ಹಾಗೂ ಮಡಿವಾಳಕ್ಕೆ ೮ ಲಕ್ಷರೂಪಾಯಿ ಎಸ್ಟಿಮೇಟ್ ಕಳುಹಿಸಿದ್ದಾರೆ. ಆದ್ದರಿಂದ ಬಿಡಿಎ, ರೆವಿನ್ಯೂ ಹಾಗೂ ವಾಟರ್‌ಸಪ್ಲೈಬೋರ್ಡ್ ಎಂದು ಹೇಳಿಕೊಂಡು ಈ ಕೆಲಸ ಬಹಳ ನಿಧಾನವಾಗಿದೆ. ಆದ್ದರಿಂದ ಈ ಹಳ್ಳಿಗಳಿಗೆ ನೀರಿನ ವ್ಯವಸ್ಥೆ ಯಾಗಿಲ್ಲ. ಆದ್ದರಿಂದ ಯಾವುದಾದರೂ ಒಂದು ಇಲಾಖೆ ಈ ಕೆಲಸವನ್ನು ತೆಗೆದುಕೊಂಡು ಬೇರೆ ಇಲಾಖೆಯಿಂದ ಎಷ್ಟು ಹಣ ಬರಬೇಕೋ ತೆಗೆದುಕೊಂಡು ಆದಷ್ಟು ಜಾಗ್ರತೆ ಈ ಹಳ್ಳಿಯ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಧರ್ಮಸಿಂಗ್ —ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಹಾಗೆ ವಾಟರ್‌ಸಪ್ಲೈ ಬಗ್ಗೆ ಬಿಡಿಎ ಮತ್ತು ಇತರೆ ಇಲಾಖೆಗಳು ನಾವು ಎಲ್ಲರೂ ಕೂಡಿ ಎಲ್ಲಿ ವಾಟರ್‌ಸಪ್ಲೈ ತೊಂದರೆ ಇದೆ ಎಂಬುದನ್ನು ಸಮಾಲೋಚನೆಮಾಡಿ ಈಗ ಇರುವ ಎಲ್ಲಾ ಯೋಜನೆಯ ಬಗ್ಗೆ ಕಾರ್ಯಕ್ರಮತೆಗೆದುಕೊಳ್ಳುವ ಬಗ್ಗೆ ವಿಚಾರಮಾಡುತ್ತಿದ್ದೇವೆ ಮತ್ತು ಬೆಂಗಳೂರು ನಗರಸಭೆಯ ವಿಸ್ತರಣೆಯಾಗಿರುವ ಎಲ್ಲಾ ಕಡೆಗೂ ವಾಟರ್‌ಸಪ್ಲೈ ಕೊಡಬೇಕೆಂದು ವಿಚಾರ ಮಾಡುತ್ತಿದ್ದೇವೆ. ಯಾವ ಯಾವ ಹಳ್ಳಿಗಳು ಸೇರಿವೆ ಮತ್ತು ಎಲ್ಲೆಲ್ಲಿ ತೊಂದರೆಯಾಗಿದೆ ಅವುಗಳ ಬಗ್ಗೆ ತೀವ್ರವಾಗಿ ಕ್ರಮತೆಗೆದುಕೊಂಡು ನೀರನ್ನು ಕೊಡತಕ್ಕಂಥ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಶಿವಪ್ಪ (ಹರಿಹರ).—ಸ್ವಾಮಿ, ದಾವಣಗೆರೆಗೆ ಕುಡಿಯುವ ನೀರಿನ ಬಗ್ಗೆ ಭದ್ರಾ ಚಾನಲ್ ನಿಂದ ನೀರನ್ನು ತೆಗೆದುಕೊಂಡು ನೀರಿನ ವ್ಯವಸ್ಥೆ ಮಾಡಿದ್ದಾರೆ ಇದರಿಂದ ದಾವಣಗೆರೆಯಲ್ಲಿ ಸರಿಯಾಗಿ ನೀರು ಬರುವುದಿಲ್ಲ, ಜೊತೆಗೆ ಅಲ್ಲಿನ ರೈತರಿಗೆ ಬೆಳೆಗೆ ತೊಂದರೆಯಾಗಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದರ ಬಗ್ಗೆ ಚಾನಲ್‌ನಿಂದ ನೀರನ್ನು ತೆಗೆದುಕೊಳ್ಳುತ್ತಿದ್ದಾರೆ ನಮಗೆ ತೊಂದರೆಯಾಗುತ್ತಿದೆ ಎಂದು ರೈತರು ಸರ್ಕಾರಕ್ಕೆ ಮನವಿ ಮಾಡಿದ್ದಾರೆ, ಇದರ ಬಗ್ಗೆ ಸರ್ಕಾರದವರು ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ?

ಶ್ರೀ ಧರ್ಮಸಿಂಗ್.—ಇದರ ಬಗ್ಗೆ ವಿಚಾರ ಮಾಡುತ್ತೇವೆ.

ಶ್ರೀ ಮಳ್ಳೂರ್ ಆನಂದರಾವ್ (ರಾಜಾಜಿನಗರ).—ಮಾನ್ಯ ಮಂತ್ರಿಗಳು ಎಲ್ಲೆಲ್ಲಿ ಕುಡಿಯುವ ನೀರಿನ ತೊಂದರೆ ಇದೆ ಅದರ ಬಗ್ಗೆ ಎಲ್ಲಾ ಹೇಳಿದ್ದಾರೆ. ಆದರೆ ನಮ್ಮ ಬೆಂಗಳೂರು ಜನರಿಗೆ ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ, ಈ ಕ್ಷಣದಲ್ಲಿ ರಾಜಾಜಿನಗರದ ಭಾಗದಲ್ಲಿ ನೀರು ಇಲ್ಲ. ನಾನು ರಾಜಾಜಿನಗರ ಕ್ಷೇತ್ರದಲ್ಲಿದ್ದೇನೆ ನನಗೇ ಕುಡಿಯುವ ನೀರು ಇಲ್ಲದೆ ತೊಂದರೆಯಾಗಿದೆ. ಆದ್ದರಿಂದ ನಮ್ಮ ರಾಜಾಜಿನಗರ ಭಾಗದಲ್ಲಿ ತುಂಬಾ ತೊಂದರೆಯಾಗಿದೆ ಇದಕ್ಕೆ ಏನಾದರೂ ವ್ಯವಸ್ಥೆಯನ್ನು ಕೂಡಲೇ ಮಾಡುತ್ತೀರಾ ಸ್ವಾಮಿ?

ಶ್ರೀ ಧರ್ಮಸಿಂಗ್.—ನಾವು ಈಗಾಗಲೇ ಈ ರೀತಿ ತೊಂದರೆಯಾಗಬಾರದು ಎಂದು ನಮ್ಮ ಅಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇನೆ ಇನ್ನು ರಾಜಾಜಿನಗರದ ಭಾಗಕ್ಕೆ ನಾಳೆಯಿಂದ ಸರಿಯಾದ ವ್ಯವಸ್ಥೆಮಾಡಿ ನೀರು ಕೊಡಲಿಕ್ಕೆ ವ್ಯವಸ್ಥೆ ಮಾಡಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ (ಹೊಳೆ ನರಸಿಪುರ).—ಬೆಂಗಳೂರು ನೀರಿನ ಸಮಸ್ಯೆ ಬಗ್ಗೆ ಅನೇಕ ಸಾರಿ ಈ ಸಭೆಯಲ್ಲಿ ಚರ್ಚೆಯಾಗಿದೆ, ಜೊತೆಗೆ ಹೇಳಬೇಕೆಂದರೆ ಈ ವಿಷಯ ಚರ್ಚೆಯಾಗದ ಅಧಿವೇಶನವೇ ಇಲ್ಲ. ಆದ್ದರಿಂದ ಈ ಸಮಸ್ಯೆ ಚರ್ಚೆಯಾಗತಕ್ಕಂಥಾದ್ದು ತೊಂದರೆ ಇಲ್ಲದೆ ಸಮಸ್ಯೆ ಚರ್ಚೆಯಾಗುತ್ತದೆಂದು ನಾನು ಭಾವಿಸುವುದಿಲ್ಲ. ಆದ್ದರಿಂದ ಈ ಸಮಸ್ಯೆ ಬಗ್ಗೆ ಆಮೂಲಾಗ್ರವಾಗಿ ಪರಿಶೀಲನೆಮಾಡಬೇಕಾಗುತ್ತದೆ ಈ ವಿಷಯದ ಬಗ್ಗೆ ಕನ್ನಡ ಪ್ರಭಾದಲ್ಲಿ ಈ ಸಮಸ್ಯೆಯನ್ನು ಬಗೆಹರಿಸುವುದರಲ್ಲಿ ಜನರಿಗೆ ಭ್ರಮರನಿರಸನವಾಗಿದೆ ಎಂದು ಬಂದಿದೆ. ಮಾನ್ಯ ಮಂತ್ರಿಗಳು ಓದಿನೋಡಬೇಕು. ಹಲವಾರು ವಿಧದಲ್ಲಿ ತಮ್ಮ ತಮ್ಮ ರೀತಿಯಲ್ಲಿ ಬಿಡಿಎ, ನಗರಸಭೆ ಮತ್ತು ಜಲಮಂಡಲಿಗಳವರು ಹೇಳುತ್ತಿದ್ದಾರೆ. ಆದ್ದರಿಂದ ನಾನು ಕೆಲವು ಭಾಗಕ್ಕೆ ಹೋಗಿ ನೋಡಿದ್ದೇನೆ ಅದನ್ನು ಕೇಳಿದರೆ ಬೋರ್‌ವೆಲ್ ಹಾಕಿಸುತ್ತೇವೆಂದು ಹೇಳುತ್ತಿದ್ದಾರೆ, ಬೆಂಗಳೂರು ನಗರದಿಂದ ಚುನಾಯಿತ ಪ್ರತಿನಿಧಿಗಳು ಏನು ಇದ್ದಾರೆ ಅವರು ಮತ್ತು ಇಲಾಖೆಗಳವರು ಕೂಡಿ ಒಂದು ಜಂಟಿ ಸಭೆ ನಡೆಸಿ ಇದಕ್ಕೆ ಒಂದು ನಿರ್ಣಯವನ್ನು ಮಾಡಬೇಕು ಜನರು ಸುಮಾರು ಒಂದೂ ಒಂದೂವರೆ ಮೈಲಿ ದೂರ ನೀರು ತರುವುದಕ್ಕೆ ಹೋಗಬೇಕಾಗುತ್ತದೆ. ಬೆಂಗಳೂರು ನಗರದಲ್ಲಿ ನೀರಿನ ತೊಂದರೆ ಇರುವುದನ್ನು ನಾನು ನೋಡಿಕೊಂಡು ಬಂದಿದ್ದೇನೆ. ಆದ್ದರಿಂದ ಮಾನ್ಯ ಮಂತ್ರಿಗಳು ಮೂರು ಇಲಾಖೆಗಳಿಗೂ ಸಂಬಂಧಪಟ್ಟ ಅಧಿಕಾರಿಗಳನ್ನು ಮತ್ತು ಖಾಸಗಿ ಮುಖಂಡರನ್ನೂ ಮತ್ತು ಚುನಾಯಿತ ಪ್ರತಿನಿಧಿ ಗಳನ್ನೂ ಕರೆಸಿ ಒಂದು ಸಮಗ್ರಯೋಜನೆ ಮಾಡಿ ಇದಕ್ಕೆ ಒಂದು ಶಾಶ್ವತವಾದ ಪರಿಹಾರ ಮತ್ತು ತಾತ್ಕಾಲಿಕವಾದ ಪರಿಹಾರ ಈ ಎರಡರ ಬಗ್ಗೆಯೂ ಒಂದು ಅಂತಿಮವಾದ ನಿರ್ಣಯವನ್ನು ತೆಗೆದು ಕೊಂಡು ಈ ಸಭೆಗೆ ೨೬ನೇ ತಾರೀಖು ಮತ್ತೆ ಸೇರಿದಾಗ ದಯಮಾಡಿ ಈ ಬಗ್ಗೆ ಏನು ನಿರ್ಣಯ ತೆಗೆದುಕೊಂಡಿದ್ದೀರಿ ಎಂಬುದನ್ನು ಈ ಸಭೆಗೆ ತಿಳಿಸುತ್ತೀರಾ?

ಶ್ರೀ ಧರ್ಮಸಿಂಗ್.—ಈಗಾಗಲೇ ಮಾನ್ಯ ದೇವೇಗೌಡರು ಹೇಳಿದ ಹಾಗೆ ನಾವು ನೀರಿನ ಸಮಸ್ಯೆಯ ಬಗ್ಗೆ ಆಸಕ್ತಿಯನ್ನು ತೋರಿಸಿದ್ದೇವೆ. ಸರ್ಕಾರ ಇದರ ಬಗ್ಗೆ ಕ್ರಮ ತೆಗೆದುಕೊಂಡಿದೆ. ಈ ತಿಂಗಳು ೧೧ನೇ ತಾರೀಖು ನಗರಕ್ಕೆ ಸಂಬಂಧಪಟ್ಟ ಎಲ್ಲಾ ಶಾಸಕರ ಸಭೆಯನ್ನೂ ಕರೆದಿದ್ದೇವೆ. ಆ ಸಭೆಯಲ್ಲಿ ಈ ವಿಷಯವನ್ನು ಚರ್ಚೆ ಮಾಡುತ್ತೇವೆ ಇದರ ಬಗ್ಗೆ ಏನೇನು ತೊಂದರೆಗಳು ಇವೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಇದರ ಬಗ್ಗೆ ಪರಿಹಾರ ಮಾಡುವ ಆಶ್ವಾಸನೆಯನ್ನು ಕೊಡುತ್ತೇನೆ. ಮತ್ತು ಯಾವರೀತಿ ಕ್ರಮತೆಗೆದುಕೊಂಡಿದ್ದೇವೆ ಎಂಬುದನ್ನು ನಾನು ಈ ಸಭೆಗೆ ತಿಳಿಸುತ್ತೇನೆ.

SRI K. BHASKAR NAIDU.—I have been hearing several members saying that there is no water in some places in Bangalore City. I come from a place where there is no water at all. Even the sweat in the body gets dried up because of the high temperature of 40 degrees now. If at all there is any place in Karnataka without water, it is Bellary. In Gulbarga they have sunk so much money for the purpose of providing drinking water. I would like to know what has

happened to that. In this connection I would like to ask the Minister whether he will take up the question of supplying drinking water to Bellary on top priority.

ಶ್ರೀ ಧರ್ಮಸಿಂಗ್.—ನಾನು ನಿನ್ನೆ ಕೂಡ ಈ ಬಗ್ಗೆ ಮಾನ್ಯ ಸದಸ್ಯರ ಜೊತೆಯಲ್ಲಿ ಮಾತನಾಡಿದ್ದೇನೆ. ಸಂಬಂಧಪಟ್ಟ ಮಂತ್ರಿಗಳು ೧೦ನೇ ತಾರೀಖು ಈ ಬಗ್ಗೆ ಚರ್ಚೆ ಮಾಡುತ್ತಾರೆ. ಮತ್ತು ೧೦ನೇ ತಾರೀಖು ಬಳ್ಳಾರಿಯ ಶಾಸಕರೆಲ್ಲರೂ ಬರುತ್ತಾರೆ. ಚೀಫ್ ಇಂಜಿನಿಯರೂ ಬರುತ್ತಾರೆ. ಬಳ್ಳಾರಿಗೆ ಕೆನಾಲ್‌ನಿಂದ ಯಾವರೀತಿ ನೀರನ್ನು ತೆಗೆದುಕೊಳ್ಳಬೇಕು ಎಂಬುದನ್ನು ಯೋಚನೆ ಮಾಡುತ್ತೇವೆ.

ಶ್ರೀ ಎಂ. ವಿ. ರಾಜಶೇಖರನ್.—ಬೆಂಗಳೂರು ನಗರಕ್ಕೆ ಹತ್ತಾರು ಹಳ್ಳಿಗಳು ಸೇರಿ ಬೆಂಗಳೂರು ವಿಸ್ತಾರವಾಗುತ್ತಿದೆ. ಬೆಂಗಳೂರು ನಗರಕ್ಕೆ ಕಾವೇರಿನದಿಯಿಂದ ಸಾಕಷ್ಟು ನೀರನ್ನು ಒದಗಿಸಬೇಕೆಂದು ಸರ್ಕಾರ ಪ್ರಯತ್ನ ಮಾಡುತ್ತಿದೆ. ಅದಕ್ಕೆ ಸಂಬಂಧಪಟ್ಟ ಇಲಾಖೆಯೂ ಪ್ರಯತ್ನ ಮಾಡುತ್ತಿದೆ. ಸಂತೋಷ. ಆದರೆ ನಡುವೆ ಸೇರತಕ್ಕ ಹಳ್ಳಿಗಳು ಏನಿವೆ ಅವುಗಳಲ್ಲಿರತಕ್ಕ ಜನಗಳ ಸ್ಥಿತಿ ಬಹಳ ಶೋಚನೀಯವಾಗಿದೆ. ಅನುಕೂಲಸ್ಥರ ಮನೆಗಳಿಗೆ ನಲ್ಲಿ ನೀರನ್ನು ಒದಗಿಸಿದ್ದಾರೆ. ಈ ನಡುವೆ ಇರತಕ್ಕ ಹಳ್ಳಿಗಳ ಜನಗಳಿಗೆ ಯಾವ ವಿಧವಾದ ಅನುಕೂಲವನ್ನು ಮಾಡಿಲ್ಲ. ಆದ್ದರಿಂದ ಈ ಬಗ್ಗೆ ಕಾರ್ಯಕ್ರಮ ಹಾಕಿಕೊಂಡು ಈ ನೀರಿನ ಸಮಸ್ಯೆಯನ್ನು ಬಗೆಹರಿಸುತ್ತೀರಾ? ಈ ಬಗ್ಗೆ ಈ ಸದನದಲ್ಲಿ ಹತ್ತಾರು ಸಾರಿ ಹೇಳಿದ್ದರೂ ಏನೂ ಮಾಡಿಲ್ಲ. ಆದ್ದರಿಂದ ಈ ಬಗೆ ಏನಾದರೂ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಈ ಸಮಸ್ಯೆಯನ್ನು ಬಗೆಹರಿಸುತ್ತೀರಾ?

ಶ್ರೀ ಧರ್ಮಸಿಂಗ್.—ದೊಡ್ಡವರಿಗೆ ನೀರು ಕೊಡಬೇಕು, ಸಣ್ಣವರಿಗೆ ಕೊಡಬಾರದು ಎಂದು ಸರ್ಕಾರದ ನೀತಿಯಲ್ಲ. ನೀರಿನ ತೊಂದರೆ ಇರತಕ್ಕ ಎಲ್ಲಾ ಕಡೆಗೂ ಕುಡಿಯುವ ನೀರನ್ನು ಕೊಡಬೇಕೆಂಬುದೇ ಸರ್ಕಾರದ ಉದ್ದೇಶ. ಕೆಲವು ಹಳ್ಳಿಗಳಿಗೆ ಕೊಟ್ಟಿದೆ, ಕೆಲವು ಹಳ್ಳಿಗಳಿಗೆ ಕೊಟ್ಟಿಲ್ಲ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ, ಇದನ್ನು ಗಮನದಲ್ಲಿ ಇಟ್ಟುಕೊಂಡು ಏನು ಮಾಡಬೇಕು ಎನ್ನುವ ಪ್ರಯತ್ನ ಮಾಡುತ್ತೇನೆ.

ಶ್ರೀ ಪಿ. ರಾಮದೇವ್.—ಕಾವೇರಿಯೋಜನೆಯ ಎರಡನೇ ಹಂತಕ್ಕೆ ಹಣವನ್ನು ಪಡೆದಿರತಕ್ಕ ವಿವರಗಳನ್ನು ನನ್ನ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ ಹೇಳಿದ್ದೀರಿ, ಇದರ ಬಗ್ಗೆ ಕೇಂದ್ರ ಸರ್ಕಾರದಿಂದ ಸಬ್ಸಿಡಿ ಗ್ರ್ಯಾಂಟ್ ಆಥವಾ ಇಂಟರೆಸ್ಟ್ ಫ್ರೀ ಲೋನ್ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಪಟ್ಟಿದ್ದೀರಾ? ಇತರ ರಾಜ್ಯಗಳಿಗೂ ಕೂಡ ಕೇಂದ್ರ ಸರ್ಕಾರದವರು ನಗರ ನೀರಿನ ಯೋಜನೆಗೆ ಹಣವನ್ನು ಕೊಟ್ಟಿದ್ದಾರೆ ಅದೇರೀತಿ ನಮ್ಮ ರಾಜ್ಯಕ್ಕೂ ಹಣವನ್ನು ಪಡೆಯುವುದಕ್ಕೆ ಪ್ರಯತ್ನ ಮಾಡುತ್ತೀರಾ? ತಾವು ಜೀವವಿಮಾ ಸಂಸ್ಥೆಯಿಂದ ಸಾಲ ತೆಗೆದುಕೊಳ್ಳತಕ್ಕ ಹಣಕ್ಕೆ ಎಷ್ಟು ಎಷ್ಟು ಇಂಟರೆಸ್ಟ್ ಕೊಡುತ್ತೀರಾ ಎಂಬುದನ್ನು ಹೇಳುತ್ತೀರಾ?

ಶ್ರೀ ಧರ್ಮಸಿಂಗ್.—ಅದನ್ನು ವಿಚಾರ ಮಾಡಿ ಹೇಳುತ್ತೇನೆ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು.

ಶ್ರೀ ಎಸ್. ಭೀಮಣ್ಣಖಂಡ್ರೆ.—ಸ್ವಾಮಿ ಮೊನ್ನೆ ಮೇಲ್ಮನೆಯಲ್ಲಿ ಇಬ್ಬರು ಸದಸ್ಯರು ನನ್ನ ಮೇಲೆ ಸುಳ್ಳು ಆಪಾದನೆಯನ್ನು ಮಾಡಿದ್ದಾರೆ, ಅದು ಕಂಟೆಮ್ಪ್ಟ್ ಆಫ್ ದಿ ಹೌಸ್ ಆಗುತ್ತದೆ.

MR. SPEAKER.—I am examining that aspect.